ಪ್ರಸ್ತಾಪ ಮಾಡಿದ್ದಾರೆ. ಅದು ಸರಿಯಾದಂತಹ ಕ್ರಮ ಕೂಡ ಮತ್ತು ಸತ್ಸಂಪ್ರದಾಯವಾಗಿದೆ. ಯಾವುದೇ ಪ್ರೆಮಿಸಸ್‌ನಲ್ಲಿ ಆಗಿರತಕ್ಕಂಥ ವಿಚಾರದಲ್ಲಿ ಕೂಡ ಅದನ್ನು ಗಮನಕ್ಕೆ ತೆಗೆದು ಕೊಳ್ಳಬೇಕಾಗಿರುತ್ತದೆ. ಇದೊಂದು ಅಹಿತಕರವಾದಂತಹ ರೀತಿಯಲ್ಲಿ ಆಗಬಾರದು. ನಾವು ಮತ್ತೆ ಈಗ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಆ ಅಧಿಕಾರಿ ಹೆಸರನ್ನು ಹೇಳುವುದಾಗಲಿ, ಅದರ ಬಗ್ಗೆ ಮಾತನಾಡತಕ್ಕಂಥಾದ್ದು ಸೂಕ್ತವಲ್ಲ. ಏಕೆಂದರೆ ಅವರು ತಮ್ಮನ್ನು ತಾವು ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದೆ ನಿಮಗೆಲ್ಲಾ ಗೊತ್ತಿರಬಹುದು; ಹಿರಿಯರಾಗಿರತಕ್ಕಂಥ ಮಾನ್ಯ ನಂಜೇಗೌಡರು ಅವತ್ತಿನ ಮುಖ್ಯ ಕಾರ್ಯದರ್ಶಿಗಳ ಹೆಸರನ್ನು ತೆಗೆದುಕೊಂಡು ಮಾತನಾಡಿದರು. ಆಗ ಶ್ರೀ ಎಸ್.ಬಿ. ಮುದ್ದಪ್ಪನವರು ಇದ್ದರು. ನಾವು ಆಗ ಆಡಳಿತ ಪಕ್ಷದಲ್ಲಿದ್ದರೂ ಕೂಡ ಅದಕ್ಕೆ ಪ್ರತಿಭಟನೆ ಮಾಡಿದೆವು. ಏಕೆಂದರೆ ಅವರು ಮುಖ್ಯ ಕಾರ್ಯದರ್ಶಿಗಳಾಗಿದ್ದು ಇಲ್ಲಿ ಅವರ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ಆದ್ದರಿಂದ ತಾವು ಆ ರೀತಿ ಆಪಾದನೆ ಮಾಡಬಾರದು. ಒಂದು ವೇಳೆ ಆಪಾದನೆ ಮಾಡಬೇಕಾಗಿದ್ದರೆ ಅದರ ಬಗ್ಗೆ ಒಂದು ನೋಟೀಸ್ ಅನ್ನು ಕೊಡಿ ಎನ್ನುವಂಥಾದ್ದನ್ನೂ ಕೂಡ ಇಲ್ಲಿ ಮಾಡಿದ್ದೆವು. ಆಗ ಮಾನ್ಯ ರಮೇಶ್‌ಕುಮಾರ್‌ರವರೇ ಸ್ಪೀಕರ್ ಆಗಿದ್ದರು. ಇಂತಹ ಸಂದರ್ಭಗಳಿರುವುದರಿಂದ ನಾನು ವಿನಂತಿ ಮಾಡಿಕೊಳ್ಳುವುದಿಷ್ಟೆ. ಅಧಿಕಾರಿ ಅಥವಾ ಯಾರೇ ಆಗಲಿ, ಈಗ ತೆಗೆದುಕೊಂಡಿರತಕ್ಕಂಥ ನಿಲುವಿಗೆ ನಾವು ಕಾನೂನನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಲ್ಯಾಂಡ್ ಆರ್ಮಿಗೆ ಸಂಬಂಧಪಡತಕ್ಕಂಥವರು ಪಾರದರ್ಶಕ ಕಾನೂನಿನ ಕೆಳಗೆ ಟೆಂಡರ್‌ನಲ್ಲಿ ಭಾಗವಹಿಸಬೇಕು ಎನ್ನುವಂತಹ ನಿಯಮ ಇದೆ. ಅದು ನಮಗೆ ಇಷ್ಟವಾಗಲಿ, ಇಷ್ಟವಾಗದೇ ಇರಲಿ. ನಾವು ಅದನ್ನು ತಿದ್ದುಪಡಿ ಮಾಡಿಕೊಳ್ಳತಕ್ಕಂಥದ್ದು ನಮ್ಮ ಅಧಿಕಾರವೇ ವಿನಃ ನೀವು ಆ ರೀತಿ ಕಾನೂನು ಹೇಳುತ್ತೀರಲ್ಲಾ ಎಂದು ಅಧಿಕಾರಿಗಳ ಮೇಲೆ ಸಿಟ್ಟಾಗತಕ್ಕಂಥಾದ್ದೂ ಕೂಡ ಸರಿಯಾದುದಲ್ಲ. ನಾನು ಮಾನ್ಯ ರೇಣುಕಾಚಾರ್ಯ ಅವರಿಗೆ ವಿನಂತಿ ಮಾಡಿಕೊಳ್ಳತಕ್ಕಂಥಾದ್ದು, ಅದನ್ನು ನಾವು ಬೇರೆ ರೀತಿಯಲ್ಲಿ ಬಗೆಹರಿಸಬೇಕು. ದಯವಿಟ್ಟು ನಮ್ಮಷ್ಟಕ್ಕೆ ನಾವೇ ಸ್ವಯಂ ನಿಯಂತ್ರಣಕ್ಕೆ ಒಳಪಟ್ಟು, ಇದನ್ನು ಇಲ್ಲಿಗೇ ಮರೆತು ಬಿಟ್ಟು ಮುಂದುವರೆಯಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

7. ಅಧ್ಯಕ್ಷರ ತೀರ್ಪು.

ವಿಷಯ: ವಿಧಾನಸಭೆಯ ಸಭಾಂಗಣದೊಳಗಡೆ ಅಧಿಕಾರಿಗಳೊಂದಿಗೆ ಶಾಸಕರುಗಳು ಅಧ್ಯಕ್ಷರ ಅನುಮತಿ ಮೇರೆಗೆ ಮಾತನಾಡುವ ಬಗ್ಗೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಐದು ನಿಮಿಷ ಮಾತನಾಡಿಬಿಡಿ. ಇಲ್ಲಿ ಅಧಿಕಾರಿಗಳ ಗ್ಯಾಲರಿ ಇದೆ. ಅಲ್ಲಿ ಅಧಿಕಾರಿಗಳು ಸಚಿವರಿಗೆ ಸಹಾಯ ಮಾಡುವುದಕ್ಕೆ ಬಂದಿರುತ್ತಾರೆ. ಇದನ್ನು ನಾನು ಏಕೆ ಹೇಳಬೇಕಾಗಿದೆ ಎಂದರೆ ನನ್ನ ಪರ್ಮಿಷನ್ ಇಲ್ಲದೆ ಯಾರೂ ಅಧಿಕಾರಿಗಳ ಹತ್ತಿರ ಮಾತನಾಡಬಾರದು. ಇಲ್ಲದೇ ಇದ್ದರೆ ಜವಾಬ್ದಾರಿ ನನ್ನ ಮೇಲೆ ಬರುತ್ತದೆ. ಯಾರಾದರೂ ಕೂಡ ಏನಾದರೂ ಇದ್ದರೆ ಸಚಿವರ ಹತ್ತಿರ ಮಾತನಾಡಿಕೊಳ್ಳಿ. ಏನಾದರೂ ಮಾಡಿಕೊಳ್ಳಿ. ಆದರೆ ಅಧಿಕಾರಿಗಳ ಹತ್ತಿರ ಯಾರೂ ಇನ್ನು ಮುಂದೆ ದಯಮಾಡಿ ನನ್ನ ಪರ್ಮಿಷನ್ ಇಲ್ಲದೆ ಮಾತನಾಡಬಾರದು. ಆಯಿತು. ವಾಟಾಳ್ ನಾಗರಾಜ್‌ರವರೇ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳಿಗಿಲ್ಲ.